ದಿನಾಂಕಃ09.07.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಂದುವರೆದ ಪಾಟೀಸವಾಲುಃ ಶ್ರೀ.ಕೆಆರ್‌ಬಿ ವಕೀಲರಿಂದ ಆರೋಪಿ ಪರವಾಗಿ.

5. ಮೆಮೋರಾಂಡಮ್ ಪತ್ರದಲ್ಲಿ ತಿಳಿಸಿರುವಂತಹ ರೂ.43,00,000-00 ಗಳನ್ನು ಆರೋಪಿಯು ಯಾವಾಗ ವಾಪಸ್ಸು ಕೊಡಬೇಕು ಎನ್ನುವ ಷರತ್ತನ್ನು ತಿಳಿಸಲಾಗಿತ್ತು ಎಂದರೆ ದಿಃ03.10.2017 ಕ್ಕೆ ನಿಗದಿಪಡಿಸಲಾಗಿತ್ತು. ಆ ಪತ್ರದಲ್ಲಿ ತಿಳಿಸಿದಂತೆ ದಿನಾಂಕದ ಒಳಗಡೆ ಆರೋಪಿಯು ಆ ಹಣವನ್ನು ವಾಪಸ್ಸು ಪಾವತಿ ಮಾಡಿರುವುದಿಲ್ಲ. ಆರೋಪಿಯು ಆ ಪತ್ರದಲ್ಲಿ ತಿಳಿಸಿದಂತೆ ಹಣವನ್ನು ವಾಪಸ್ಸು ಪಾವತಿ ಮಾಡದಿರುವ ಕುರಿತಂತೆ ನಮ್ಮ ವಕೀಲರ ಮೂಲಕ ಆರೋಪಿಗೆ ನೋಟೀಸನ್ನು ಕೊಡಿಸಲಾಗಿರುತ್ತದೆ. ಆ ನೋಟೀಸನ್ನು ಯಾವಾಗ ಕೊಡಲಾಗಿರುತ್ತದೆ ಎಂದರೆ ದಿನಾಂಕ ನೆನಪಿರುವುದಿಲ್ಲ. ಆ ನೋಟೀಸಿನ ಪ್ರತಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇವೆ. ನಾವು ನೋಟೀಸನ್ನು ಕೊಡಿಸಿದ ನಂತರ ಆರೋಪಿಯು ಹಣವನ್ನು ಪಾವತಿ ಮಾಡಿರುವುದಿಲ್ಲ. ಈ ಪ್ರಕರಣದಲ್ಲಿನ ಎರಡು ಚೆಕ್ಕುಗಳನ್ನು ಯಾವ ಕಾರಣಕ್ಕಾಗಿ ಕೊಟ್ಟಿರುತ್ತಾರೆ ಎಂದರೆ 2016ರಲ್ಲಿ ಮಾಡಿಕೊಳ್ಳಲಾದ ರದ್ದಾಯಿತಿ ಕ್ರಯ ಪತ್ರದ ಕುರಿತಂತೆ ಆರೋಪಿಯು ಪಡೆದುಕೊಂಡಿದ್ದ ಹಣದ ಮರುಪಾವತಿಗಾಗಿ ಕೊಟ್ಟಿದ್ದು ಆಗಿರುತ್ತದೆ. ರೂ.43,00,000-00ಗಳಿಗೆ ಚೆಕ್ಕುಗಳನ್ನು ಯಾವ ದಿನಾಂಕದಂದು ಕೊಟ್ಟಿರುತ್ತಾರೆ ಎಂದರೆ ದಿಃ 3.10.2016ರಂದು ಕೊಟ್ಟಿರುತ್ತಾರೆ. ಆ ಚೆಕ್ಕುಗಳನ್ನು ಕೊಟ್ಟಿರುವ ಕುರಿತಂತೆ ಏನಾದರೂ ಸ್ವೀಕೃತಿ ಕೊಡಲಾಗಿರುತ್ತದೆಯಾ ಎಂದರೆ ಆ ಕುರಿತಂತೆ ಮೊಮೋರಾಂಡಮ್ ಪತ್ರದ ಹಿಂಬದಿಯಲ್ಲಿ ಬರೆದು ಸಹಿ ಮಾಡಲಾಗಿರುತ್ತದೆ. ನಾನು ಹೇಳುವಂತೆ ಆರೋಪಿ ಮತ್ತು ಪಿರ್ಯಾದಿದಾರರ ಮದ್ಯೆ ಯಾವುದೇ ಮೊಮೋರಾಂಡಮ್ ಪತ್ರ ಆಗಿರುವುದಿಲ್ಲ ಮತ್ತು ಪತ್ರವನ್ನು ಆರೋಪಿ ಬರೆದುಕೊಟ್ಟಿರುವುದಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಆ ಪತ್ರವು ಆರೋಪಿಯ ಹತ್ತಿರ ಇರುತ್ತದೆ ಎಂದು ನುಡಿದಿರುತ್ತಾರೆ.

6. ಚೆಕ್ಕುಗಳು ಬ್ಯಾಂಕ್‌ನಿಂದ ವಾಪಸ್ಸು ಬಂದ ನಂತರ ನಾವು ನಮ್ಮ ವಕೀಲರ ಮೂಲಕ ಕಳುಹಿಸಿರುವ ನೋಟೀಸಿಗೆ ಆರೋಪಿಯು ಅವರ ವಕೀಲರ ಮುಖಾಂತರ ಉತ್ತರವನ್ನು ಕೊಡಿಸಿರುತ್ತಾರೆ ಎಂದರೆ ಸರಿ. ಆರೋಪಿಯು ಕೊಡಿಸಿರುವ ನೋಟೀಸಿನ ಉತ್ತರವು ನಿಪಿಃ14ರಂತಿರುವ

ದಾಖಲೆ ಆಗಿರುತ್ತದೆ ಎಂದರೆ ಸರಿ. ಆರೋಪಿಯು ಕೊಡಿಸಿರುವ ನೋಟೀಸಿನ ಉತ್ತರದಲ್ಲಿ ತಿಳಿಸಿರುವ ಅಂಶಗಳ ಕುರಿತು ನನಗೆ ಗೊತ್ತಿರುತ್ತದೆ. ನೋಟೀಸಿನ ಉತ್ತರದಲ್ಲಿ ನಿಗದಿತ ಸಮಯದ ಒಳಗಡೆ ಬಾಕಿ ಹಣವನ್ನು ಪಾವತಿ ಮಾಡಿ ಕ್ರಯಪತ್ರವನ್ನು ನೋಂದಣಿ ಮಾಡಿಸಿಕೊಳ್ಳದಿದ್ದರಿಂದ ಮುಂಗಡವಾಗಿ ಕೊಟ್ಟ ಕ್ರಯದ ಹಣವನ್ನು ಮುಟ್ಟುಗೋಲು ಹಾಕಿ ಕೊಳ್ಳಲಾಗಿರುತ್ತದೆ ಎಂದು ತಿಳಿಸಲಾಗಿರುತ್ತದೆ ಎಂದರೆ ಸರಿಯಲ್ಲ.

7. ದಿ:21.11.2017 ರಂದು ಆರೋಪಿಯು ತಮ್ಮ ವಕೀಲರ ಮೂಲಕ ಪಿರ್ಯಾದಿದಾರರಿಗೆ ಕ್ರಯದ ಕರಾರುಪತ್ರದಂತೆ ಎರಡು ವರ್ಷದ ಒಳಗಡೆ ಬಾಕಿ ಹಣವನ್ನು ಪಾವತಿ ಮಾಡಿ ಕ್ರಯಪತ್ರವನ್ನು ನೋಂದಣಿ ಮಾಡಿಸಿಕೊಳ್ಳದೇ ಇರುವುದರಿಂದ ಮುಂಗಡವಾಗಿ ಕೊಟ್ಟ ಕ್ರಯದ ಹಣವನ್ನು ಮುಟ್ಟುಗೋಲು ಹಾಕಿ ಕೊಳ್ಳಲಾಗಿರುತ್ತದೆ ಎಂದು ತಿಳಿಸಿ ಒಂದು ನೋಟೀಸನ್ನು ಕೊಡಿಸಿರುತ್ತಾರೆ ಎಂದರೆ ಸರಿ. ಆರೋಪಿಯು ನಮಗೆ ನೋಟೀಸನ್ನು ಕೊಡಿಸಿದ ನಂತರ ನಾವು ಆರೋಪಿಯ ವಿರುದ್ದ ಪೋಲೀಸ್ ಠಾಣೆಯಲ್ಲಿ ದೂರನ್ನು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಆ ನೋಟೀಸನ್ನು ಕೊಡುವುದಕ್ಕಿಂತ ಮೊದಲೇ ದೂರನ್ನು ಕೊಡಲಾಗಿತ್ತು ಎಂದು ನುಡಿದಿರುತ್ತಾರೆ. ದೂರನ್ನು ಕೊಟ್ಟ ನಂತರ ನಮ್ಮ ಮತ್ತು ಆರೋಪಿಯ ಮದ್ಯೆ ಒಂದು ಮಾತುಕತೆಯಾಗಿ ಆ ಮಾತುಕತೆಯಲ್ಲಿ ಸಂಪೂರ್ಣ ಮುಂಗಡ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಬೇಡಿ ಅದರಲ್ಲಿ ರೂ.43,00,000-00ಗಳನ್ನು ವಾಪಸ್ಸು ಕೊಡಿ ಎಂದು ಮಾತುಕತೆ ಆಗಿತ್ತು ಎಂದರೆ ಸರಿಯಲ್ಲ. ಆ ರೀತಿ ಮಾಡಿಕೊಂಡ ರಾಜಿ ಮಾತುಕತೆಯಂತೆ ಆರೋಪಿಯು ರೂ.43,00,000-00ಗಳಿಗೆ ಈ ಪ್ರಕರಣದಲ್ಲಿನ ಎರಡು ಚೆಕ್ಕುಗಳನ್ನು ಪಿರ್ಯಾದಿದಾರರಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಕ್ರಯದ ಕರಾರುಪತ್ರದ ರದ್ದಾಯಿತಿ ಮಾಡಿಕೊಳ್ಳುವ ಸಲುವಾಗಿ ಭದ್ರತೆಗಾಗಿ ಆರೋಪಿಯು ಪಿರ್ಯಾದಿದಾರರಿಗೆ ಎರಡು ಚೆಕ್ಕುಗಳನ್ನು ಕೊಟ್ಟಿದ್ದು ಮತ್ತು ಆ ಚೆಕ್ಕುಗಳ ಹಣವನ್ನು ರದ್ದಾಯಿತಿ ಪತ್ರದ ನೋಂದಣಿ ಸಮಯದಲ್ಲಿ ಡಿಡಿಯ ಮುಖಾಂತರ ಕೊಟ್ಟು ಚೆಕ್ಕುಗಳನ್ನು ವಾಪಸ್ಸು ಪಡೆದುಕೊಳ್ಳುವಂತೆ ಮಾತುಕತೆ ಆಗಿತ್ತು ಎಂದರೆ ಸರಿಯಲ್ಲ. ಪಿರ್ಯಾದಿದಾರರು ಮತ್ತು ಆರೋಪಿಯ ಮದ್ಯೆ ಆಗಿರುವಂತಹ ರಾಜಿ ಮಾತುಕತೆಯಂತೆ ಕ್ರಯದ ಕರಾರುಪತ್ರದ ರದ್ದಾಯಿತಿ ಕುರಿತಂತೆ ಆರೋಪಿಯು ಕೇವಲ

ರೂ.43,00,000-00ಗಳನ್ನು ಮಾತ್ರ ಕೊಡುವುದು ಇರುತ್ತದೆ ಎಂದರೆ ಸರಿಯಲ್ಲ. ಆರೋಪಿಂದಯು ಒಪ್ಪಿಕೊಂಡಿರುವಂತೆ ರೂ.43,00,000-00ಗಳನ್ನು ಪಡೆದುಕೊಂಡು ಕ್ರಯದ ರದ್ದಾಯಿತಿ ಪತ್ರವನ್ನು ಮಾಡಿಕೊಡುವಂತೆ ಕೇಳಿಕೊಂಡಿದ್ದರೂ ಸಹ ಪಿರ್ಯಾದಿದಾರರು ಹೋಗದೇ ಭದ್ರತೆಗಾಗಿ ಕೊಟ್ಟಂತಹ ಚೆಕ್ಕುಗಳನ್ನು ಆರೋಪಿಯ ಒಪ್ಪಿಗೆ ಇಲ್ಲದೇ ಬ್ಯಾಂಕ್‌ಗೆ ಹಾಜರುಪಡಿಸಿ ಈ ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿನ ಚೆಕ್ಕುಗಳನ್ನು ರಾಜಿ ಮಾತುಕತೆಯಂತೆ ರದ್ದಾಯಿತಿ ಕ್ರಯದ ಕರಾರುಪತ್ರವನ್ನು ನೊಂದಣಿ ಮಾಡಿಸುವ ಸಂಬಂದವಾಗಿ ಕೊಟ್ಟಿದ್ದು ಆದರೆ ರದ್ದಾಯಿತಿ ಪತ್ರವನ್ನು ನೋಂದಣಿ ಮಾಡಿಸದೇ ಇರುವುದರಿಂದ ಆರೋಪಿಯು ಚೆಕ್ಕುಗಳ ಹಣವನ್ನು ಪಾವತಿ ಮಾಡಲು ಬಾದ್ಯಸ್ಥನಾಗಿರುವುದಿಲ್ಲ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ

15ನೇ ಅಪರ ನ್ಯಾಯಾಧೀಶರು
ಮತ್ತು ಎಂಎಸಿಟಿ